## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 888
ಸದಸ್ಯರ ಹೆಸರು : ಶ್ರೀ ವೈ.ಎಂ ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು).
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.
ಉತ್ತರಿಸಬೇಕಾದ ದಿನಾಂಕ : 23.02.2024.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆಯಲ್ಲಿ ಬಾಲ ಭವನ ನಡೆಯುತ್ತಿದೆಯೇ; ಇಲ್ಲಿ ನಡೆಯುತ್ತಿರುವ ಚಟುವಟಿಕೆಗಳ ವಿವರ ನೀಡುವುದು; | ಇಲ್ಲ.<br>ಬಾಲ ಭವನ ಚಟುವಟಿಕೆಗಳು ಮಕ್ಕಳ ಕೇಂದ್ರಿತ ಚಟುವಟಿಕೆಗಳಾಗಿದ್ದು, ಸೂಕ್ತ ಮಕ್ಕಳ ಸ್ನೇಹಿ ವಾತಾವರಣ ಮತ್ತು ಉತ್ತಮ ಮೂಲಭೂತ ಸೌಕರ್ಯಗಳಿರುವ ಶಾಲಾ ಆವರಣ ಮತ್ತು ಬಾಲ ಮಂದಿರಗಳಲ್ಲಿ ಚಟುವಟಿಕೆಗಳನ್ನು ನಡೆಸಲು ಅವಕಾಶ ಮಾಡಿಕೊಡಲಾಗಿರುತ್ತದೆ. ವಾರಾಂತ್ಯ ಶಿಬಿರ, ಬೇಸಿಗೆ ಶಿಬಿರ, ಮಕ್ಕಳ ಕಲಾತ್ಮಕ ಚಟುವಟಿಕೆ, ವಾರಾಂತ್ಯ ಶಿಬಿರ, ಸಂಗೀತ, ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |
| ಆ) | ಜಿಲ್ಲಾ ಬಾಲ ಭವನ ನಿರ್ಮಾಣಕ್ಕೆ ಇರಬೇಕಾದ ಮಾನದಂಡಗಳೇನು; ಸ್ವಂತ ಕಟ್ಟಡ ನಿರ್ಮಾಣಕ್ಕೆ ಇರುವ ಅನುದಾನ ಮತ್ತು ಅದಕ್ಕೆ ಬೇಕಾದ ದಾಖಲೆಗಳ ವಿವರಗಳ ಮಾಹಿತಿ ನೀಡುವುದು; | ಹಾಲಿ ಬಳ್ಳಾರಿ ಜಿಲ್ಲೆಯ ಜಿಲ್ಲಾ ಬಾಲಭವನ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಮಂಜೂರಾಗಿರುವುದಿಲ್ಲ.<br><br>**ಬಾಲ ಭವನ ನಿರ್ಮಾಣಕ್ಕೆ ಇರಬೇಕಾದ ಮಾನದಂಡಗಳು ಹಾಗೂ ದಾಖಲೆಗಳ ವಿವರ:**<br>1. ಜಿಲ್ಲಾ ಬಾಲಭವನವನ್ನು ಸ್ಥಾಪಿಸಲು ಸಣ್ಣ ಪ್ರಮಾಣದಲ್ಲಿ ನಿರ್ಮಾಣ ಮಾಡಲು ಕನಿಷ್ಠ ಒಂದು ಎಕರೆ ಜಮೀನನ್ನು ಕಾರ್ಯದರ್ಶಿಗಳು ಜಿಲ್ಲಾ ಬಾಲಭವನ ಸಮಿತಿ ಇವರ ಹೆಸರಿನಲ್ಲಿ ಹೊಂದಿರಬೇಕು.<br>2. ಜಿಲ್ಲಾ ಬಾಲಭವನ ಕಟ್ಟಡವನ್ನು ನಿರ್ಮಿಸಲು ಜಾಗವು ಇತರರ ಹೆಸರಿನಲ್ಲಿ ಇರುವುದು ಕಂಡುಬಂದಲ್ಲಿ, ಆ ಜಮೀನಿನ ದಾಖಲೆಗಳನ್ನು ಬಾಲಭವನ ನಿರ್ಮಾಣಕ್ಕೆಂದು ದಾಖಲೆಗಳನ್ನು ನಮೂದಿಸಿ ಕೇಂದ್ರ ಬಾಲಭವನಕ್ಕೆ ದಾಖಲೆಗಳನ್ನು ಸಲ್ಲಿಸುವುದು.<br>3. ಜಿಲ್ಲಾ ಬಾಲಭವನ ಕಟ್ಟಡವನ್ನು ನಿಗಧಿತ ನಕ್ಷೆಯಂತೆ ನಿರ್ಮಿಸಲು ಅಂದಾಜು ವೆಚ್ಚದ ಪಟ್ಟಿ ತಯಾರಿಸಿ ವಿಷಯಗಳನ್ನು ಸಮಿತಿ ಸಭೆಯಲ್ಲಿ ಚರ್ಚಿಸಿ, ತಗಲಬಹುದಾದ ವೆಚ್ಚವನ್ನು ಸಭೆಯಲ್ಲಿ ಅನುಮೋದಿತ ಅಂದಾಜು ಪಟ್ಟಿಯನ್ನು ಸಲ್ಲಿಸುವುದು.<br>4. ಕಟ್ಟಡ ನಿರ್ಮಾಣಕ್ಕಾಗಿ ಪೂರ್ತಿ ಜಮೀನಿಗೆ ಬೇಲಿ ಅಥವಾ ಇನ್ನಾವುದೇ ರೀತಿಯ ಬಂದೋಬಸ್ತು ಮಾಡುವುದು. ಸದರಿ ಜಾಗದ ಹಕ್ಕು ಪತ್ರ, ಖಾತೆ ಇನ್ನಿತರೆ ಅಗತ್ಯವಿರುವ ದಾಖಲೆಗಳನ್ನು ಕೇಂದ್ರ ಬಾಲಭವನಕ್ಕೆ ಸಲ್ಲಿಸುವುದು.<br>5. ಮಕ್ಕಳಿಗೆ ಆಟಿಕೆಗಳಾದ ಜಾರುಬಂಡಿ, ಉಯ್ಯಾಲೆ, ಮುಂತಾದವುಗಳನ್ನು ಅಳವಡಿಸುವ ಬಗ್ಗೆ ಅಂದರೆ ಅಂದಾಜು ಪಟ್ಟಿ, ನಕ್ಷೆ, ಮಕ್ಕಳ ಕಾರ್ಯಕ್ರಮ/ |

| | | |
|---|---|---|
| | | ಚಟುವಟಿಕೆಗಳನ್ನು ಸುಗಮವಾಗಿ ನಡೆಸಲು ಕೈಗೊಳ್ಳಲಾಗುವ ಇತರೆ ಅಭಿವೃದ್ಧಿ ಕಾಮಗಾರಿ ಇತ್ಯಾದಿಗಳ ಬಗ್ಗೆ ಪೂರ್ಣ ಪ್ರಮಾಣದ ಪ್ರಸ್ತಾವನೆವನ್ನು ಸಲ್ಲಿಸುವುದು<br><br>6. ಜಮೀನು/ನಿವೇಶನ ಲಭ್ಯವಿದ್ದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ರಚಿಸಿರುವ ಜಿಲ್ಲಾ ಬಾಲಭವನದ ಸಮಿತಿಯ ಸಭೆಯಲ್ಲಿ ನಿರ್ಣಯಿಸಿ, ಜಿಲ್ಲಾ ಬಾಲಭವನದ ನಿರ್ಮಾಣಕ್ಕಾಗಿ ಅನುದಾನ ಅವಶ್ಯಕತೆಯಿದ್ದಲ್ಲಿ ನಡವಳಿಯೊಂದಿಗೆ ಎಲ್ಲಾ ದಾಖಲೆಗಳನ್ನು ಕೂಡಲೇ ಸೂಕ್ತ ಪ್ರಸ್ತಾವನೆಗಳೊಂದಿಗೆ ಕೇಂದ್ರ ಬಾಲಭವನಕ್ಕೆ ಸಲ್ಲಿಸಿದ್ದಲ್ಲಿ ಸೂಕ್ತ ಕ್ರಮ ಕೈಗೊಳಲ್ಲಾಗುವುದು. |
| ಇ) | ಬಳ್ಳಾರಿ ಜಿಲ್ಲೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಧ್ಯಕ್ಷರು, ಜಿಲ್ಲಾ ಬಾಲ ಭವನ, ಇವರ ಅಧ್ಯಕ್ಷತೆಯಲ್ಲಿ 04-02-2021ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಜಿಲ್ಲಾ ಬಾಲ ಭವನದ ಸ್ವಂತ ಕಟ್ಟಡ ನಿರ್ಮಾಣಕ್ಕೆ ಸರ್ಕಾರಿ ಬಾಲಕಿಯರ ಬಾಲ ಮಂದಿರ, ಸಿರಗುಪ್ಪ ರಸ್ತೆ ಇಲ್ಲಿನ ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಟ್ಟಡದ ಜಾಗವನ್ನು ಸೇರಿಸಿಕೊಂಡು ಸರ್ವೆ ನಂ.376/1ರಲ್ಲಿ 4.5 ಎಕರೆ ಜಾಗವನ್ನು ಬಳಸಿಕೊಳ್ಳಲು ನಿರ್ಣಯಿಸಲಾಗಿರುವುದಾಗಿ ಬಾಲ ಭವನ ಸೊಸೈಟಿ, ಬೆಂಗಳೂರು ಇವರಿಗೆ ಪತ್ರ ಬರೆದಿದ್ದು, ಈ ಕುರಿತು ಇಲ್ಲಿಯವರೆಗೆ ಆಗಿರುವ ಪ್ರಗತಿಯ ವಿವರಗಳೇನು: (ದಾಖಲೆಗಳೊಂದಿಗೆ ಮಾಹಿತಿ ನೀಡುವುದು) | ದಿನಾಂಕ:04.02.2020ರಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲ ಭವನ ನಿರ್ಮಾಣ ಕುರಿತು ನಡೆದ ಸಭಾ ನಡವಳಿಗಳನ್ನು ಇದರೊಂದಿಗೆ ಲಗತ್ತಿಸಿದೆ. (ಅನುಬಂಧ)<br><br>ಜಿಲ್ಲಾ ಬಾಲ ಭವನ ನಿರ್ಮಾಣಕ್ಕಾಗಿ ಸರ್ಕಾರಿ ನಿವೇಶನದ ಒಡೆತನದ ಬದಲಾವಣೆ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಈ) | ಸದರಿ ಜಿಲ್ಲೆಯಲ್ಲಿ ಜಿಲ್ಲಾ ಬಾಲ ಭವನದ ಸ್ವಂತ ಕಟ್ಟಡ ನಿರ್ಮಾಣದ ಕುರಿತು ಇಲಾಖೆಯು ಕೈಗೊಂಡ ತೀರ್ಮಾನಗಳೇನು? (ಮಾಹಿತಿ ನೀಡುವುದು ) | ಸರ್ವೆ ನಂ.376/1 ರಲ್ಲಿ ಇಲಾಖೆಗೆ ಸಂಬಂಧಿಸಿದ ಸುಮಾರು 4.5 ಎಕರೆಯಷ್ಟು ಜಾಗವನ್ನು ಬಾಲ ಭವನ ಸೊಸೈಟಿಯ ಹೆಸರಿಗೆ ವರ್ಗಾವಣೆಯಾದ ನಂತರ ಬಾಲ ಭವನ ಸಂಕೀರ್ಣ ನಿರ್ಮಾಣ ಮಾಡಲು ಅನುದಾನ ಲಭ್ಯತೆಯ ಅನುಸಾರ ಕ್ರಮವಹಿಸಲಾಗುವುದು. |

ಸಂಖ್ಯೆ: ಮಮಇ /14/ರಾಮಆ/2024

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಅನುಬಂಧ (5)

**ದಿನಾಂಕ : 04.02.2020 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಬಾಲ ಭವನ ಸೊಸೈಟಿಯ ಸಭೆಯ ನಡವಳಿಗಳು**

| | |
|---|---|
| ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, | ಅಧ್ಯಕ್ಷರು,<br>ಜಿಲ್ಲಾ ಬಾಲ ಭವನ ಸೊಸೈಟಿ, ಬಳ್ಳಾರಿ. |
| ಉಪನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಳ್ಳಾರಿ. | ಸದಸ್ಯರು,<br>ಜಿಲ್ಲಾ ಬಾಲ ಭವನ ಸೊಸೈಟಿ, ಬಳ್ಳಾರಿ. |
| ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು,<br>ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ<br>ಬಳ್ಳಾರಿ. | ಸದಸ್ಯರು,<br>ಜಿಲ್ಲಾ ಬಾಲ ಭವನ ಸೊಸೈಟಿ, ಬಳ್ಳಾರಿ. |
| ಉಪನಿರ್ದೇಶಕರು,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ. | ಸದಸ್ಯ ಕಾರ್ಯದರ್ಶಿಗಳು,<br>ಜಿಲ್ಲಾ ಬಾಲ ಭವನ ಸೊಸೈಟಿ, ಬಳ್ಳಾರಿ. |

**ಚರ್ಚಿಸಿದ ವಿಷಯಗಳು :**

- ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಬಾಭಸೊ/ನಿಪಮ/2019-20, ದಿನಾಂಕ: 18.01.2020ರಲ್ಲಿ ಮಕ್ಕಳ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಜಿಲ್ಲಾ ಬಾಲ ಭವನಕ್ಕೆ ಸ್ವಂತ ಕಟ್ಟಡ ಇಲ್ಲದೇ ಇರುವುದರಿಂದ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಹೊಂದಿದ್ದಲ್ಲಿ, ಜಿಲ್ಲಾ ಸಮಿತಿ ಮೂಲಕ ನಿರ್ಣಯ ಕೈಗೊಂಡು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುವ ಬಗ್ಗೆ ಸಮಿತಿಯಲ್ಲಿ ಚರ್ಚಿಸಲಾಯಿತು.
- ಅದರಂತೆ ಸರ್ಕಾರಿ ಬಾಲಕಿಯರ ಬಾಲಮಂದಿರ, ಸಿರುಗುಪ್ಪ ರೋಡ್, ಬಳ್ಳಾರಿ ಇಲ್ಲಿನ ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಟ್ಟಡಗಳ ಜಾಗವನ್ನು ಸೇರಿಕೊಂಡಂತೆ, ಸರ್ವೇ ನಂ.376/1ರಲ್ಲಿ ಇಲಾಖೆಗೆ ಸಂಬಂಧಿಸಿದ ಸುಮಾರು 4.5 ಎಕರೆಯಷ್ಟು ಜಾಗ ಲಭ್ಯವಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಬಳ್ಳಾರಿ ನಗರದ ಹೃದಯ ಭಾಗದಲ್ಲಿ ಇರುವ ಸರ್ಕಾರಿ ಜಾಗವನ್ನು ಅಭಿವೃದ್ಧಿಪಡಿಸಿದಲ್ಲಿ ಮಕ್ಕಳ ಚಟುವಟಿಕೆಗಳಿಗೆ ಸೂಕ್ತವಾಗಿರುತ್ತದೆಯೆಂದು ಅಭಿಪ್ರಾಯಪಡಲಾಯಿತು. ಆದ ಕಾರಣ ಸದರಿ ಜಾಗವನ್ನು ಸದುಪಯೋಗಪಡಿಸಿಕೊಂಡು ಜಿಲ್ಲಾ ಬಾಲ ಭವನದ ಕಟ್ಟಡದೊಂದಿಗೆ, ಮಕ್ಕಳ ಕಾರ್ಯಕ್ರಮಗಳಿಗಾಗಿ ಆಡಿಟೋರಿಯಂ, ಮಕ್ಕಳ ಉದ್ಯಾನವನ, ಪುಟಾಣಿ ರೈಲು, ಹೊರಾಂಗಣ ಆಟಿಕೆ ಹಾಗೂ ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಮಾಡಬಹುದಾಗಿದೆ. ಮಾರುಕಟ್ಟೆ ಸಂಕೀರ್ಣದಿಂದ ಬರುವ ಆದಾಯವನ್ನು ಬಾಲ ಭವನದ ನಿರ್ವಹಣೆಗಾಗಿ ಉಪಯೋಗಿಸಿಕೊಳ್ಳಲು ಸಮಿತಿಯಲ್ಲಿ ಚರ್ಚಿಸಲಾಯಿತು.


**ಸಮಿತಿಯ ಕೈಗೊಂಡ ತೀರ್ಮಾನಗಳು :**

- ಜಿಲ್ಲಾ ಬಾಲ ಭವನ ನಿರ್ಮಾಣಕ್ಕಾಗಿ ಸರ್ಕಾರಿ ಬಾಲಕಿಯರ ಬಾಲಮಂದಿರ, ಸಿರುಗುಪ್ಪ ರೋಡ್, ಬಳ್ಳಾರಿ ಇಲ್ಲಿನ ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಟ್ಟಡಗಳ ಜಾಗವನ್ನು ಬಳಸಿಕೊಳ್ಳಲು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು, ಇವರ ಅನುಮತಿ ಪಡೆಯಲು ಅಗತ್ಯ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.
- ಇಲಾಖೆಯ ಅನುಮತಿಯೊಂದಿಗೆ ಜಿಲ್ಲಾ ಬಾಲ ಭವನ ನಿರ್ಮಾಣಕ್ಕಾಗಿ ಸರ್ಕಾರಿ ಬಾಲಕಿಯರ ಬಾಲಮಂದಿರ, ಸಿರುಗುಪ್ಪ ರೋಡ್, ಬಳ್ಳಾರಿ ಇಲ್ಲಿನ ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಟ್ಟಡಗಳ ಜಾಗವನ್ನು ಸೇರಿಕೊಂಡಂತೆ, ಸರ್ವೇ ನಂ.376/1ರಲ್ಲಿ ಇಲಾಖೆಗೆ ಸಂಬಂಧಿಸಿದ ಸುಮಾರು 4.5 ಎಕರೆಯಷ್ಟು ಜಾಗವನ್ನು ಬಳಸಿಕೊಳ್ಳಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು.
- ಜಿಲ್ಲಾ ಬಾಲ ಭವನದ ಕಟ್ಟಡದೊಂದಿಗೆ, ಮಕ್ಕಳ ಕಾರ್ಯಕ್ರಮಗಳಿಗಾಗಿ ಆಡಿಟೋರಿಯಂ, ಮಕ್ಕಳ ಉದ್ಯಾನವನ, ಪುಟಾಣಿ ರೈಲು, ಹೊರಾಂಗಣ ಆಟಿಕೆ ಹಾಗೂ ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಮಾಡಲು ರಾಜ್ಯ ಬಾಲ ಭವನ ಸೊಸೈಟಿಗೆ ಅನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,
ಜಿಲ್ಲಾ ಪಂಚಾಯತ್ ಹಾಗೂ ಅಧ್ಯಕ್ಷರು,
ಜಿಲ್ಲಾ ಬಾಲ ಭವನ ಸೊಸೈಟಿ,
ಬಳ್ಳಾರಿ.

Scanned with CamScanner

ಭಾಗ - 3




AREA STATEMENT

TOTAL AREA:

OR

after ... Originally ...

NOTE :- 1) THE CONTOUR ...
2) ALL DIMENSIONS ...
3) BLOCK LEVEL ...

TOPOGRAPHICAL SURVEY OF ... OF WOMEN & CHILD ... NEAR S P CIRCLE BELLARY


BELLARY NIRMITHI KENDRA

BELLARY

Scanned with CamScanner

ಸರ್ವೆ ನಂ: 37

ಭಾಗ-3




INDEX TO BUILDINGS

| SL.NO. | NAME OF BUILDING |
|---|---|
| 1 | SELF EMPLOYMENT WOMENS |
| 2 | CHILDREN&WOMENS DEPT |
| 3 | QUARTERS |
| 4 | [illegible] |